ಶ್ರೀ ಆನಂದರಾವ್.—ರಾಜ್ಯದಲ್ಲಿ ಗಂಧದ ಎಣ್ಣೆ ತೆಗೆಯುವಂತಹ ಕಾರ್ಖಾನೆಗಳ ಸಂಖ್ಯೆ ಎಷ್ಟು? ಅಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರ ಸಂಖ್ಯೆ ಎಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ. ಆ ವಿವರ ಈಗ ನನ್ನ ಹತ್ತಿರ ಇಲ್ಲ.

ಶ್ರೀ ಪಿ. ರಾಮಚಂದ್ರರಾವ್.—ಆಗರಬತ್ತಿ ಕೈಗಾರಿಕೆಗಳಿಗೆ ಸಾಕಷ್ಟು ಬಾಬು ಸಿಗುತ್ತಿಲ್ಲವೆಂದು ಹೇಳುತಿ ದ್ದಾರೆ ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ,—ಬಂಬಿನ ವಿಚಾರದ ಬಗ್ಗೆ ಕೇಳುತ್ತಿದ್ದಾರೆ, ಆ ಪ್ರಶ್ನೆ ಉದ್ಭವ ವಾಗುವುದಿಲ್ಲ

ಶ್ರೀ ಎಂ. ಜಿ. ಜರತಾರಗರ್.—ಕಚ್ಚಾಮಾಲಂ ಬಂಬು ಆಗರಬತ್ತಿ ಕೈಗಾರಿಕೆಯಲ್ಲಿ ಮುಖ್ಯವಾಗಿ ಬೇಕು, ಬಂಬನ್ನು ಬೇರೆ ಬೇರೆ ದೇಶಗಳಿಂದ ತರುತ್ತಿದ್ದಾರೆ. ಅಸ್ಸಾಂ, ಮಧ್ಯಪ್ರದೇಶ ಮತ್ತು ಒರಿಸ್ಸಾ ರಾಜ್ಯಗಳಿಂದ ತರಿಸುತ್ತಿದ್ದಾರೆ. ನಮ್ಮಲ್ಲಿ ಅರಣ್ಯ ಪ್ರದೇಶವಿರುವಾಗ ಬೇರೆ ಕಡೆಗಳಿಂದ ಏತಕ್ಕೆ ಬಂಬನ್ನು ತರಬೇಕಂ. ಈ ಉದ್ಯಮ ಹೆಚ್ಚು ಬೆಳೆಯಬೇಕಾದರೆ ಸರ್ಕಾರ ಹೆಚ್ಚು ಪ್ರಗತಿಪರ ವಾದಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಇದರ ಬಗ್ಗೆ ಸರ್ಕಾರ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮೂಲ ಪ್ರಶ್ನೆಯಲ್ಲಿ ಬಂಬಿನ ವಿಷಯ ಬರುವುದಿಲ್ಲ. ಅವಶ್ಯ ವಿರತಕ್ಕ ಬಂಬನ್ನು ಸರ್ಕಾರ ವ್ಯವಸ್ಥೆ ಮಾಡುತ್ತದೆ. ಅವರ ಬೇಡಿಕೆ ನಮ್ಮಮುಂದೆ ಇದೆ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಗಂಗಣ್ಣನವರು ಪ್ರಶ್ನೆ ಕೇಳಬೇಕು, ಸದಸ್ಯರು ಗೈರು ಹಾಜರಾಗಿದ್ದಾರೆ.

ಮುಂಡರಗಿ ತಾಲ್ಲೂಕಿನಲ್ಲಿ ಅಡವಿ ಹನುಮಂತಪ್ಪ ಯಾತ ನಿರಾವರಿ ಯೋಜನೆ

ಪ್ರ ೪೦ (೧೬) ಶ್ರೀ ಕೆ. ಹೆಚ್. ಕುರಡಗಿ (ಮುಂಡರಗಿ).—ಮಾನ್ಯ ಸಣ್ಣ ನಿರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಮುಂಡರಗಿ ತಾಲ್ಲೂಕಿನ ಅಡವಿ ಹನುಮಪ್ಪ ಏತ ನೀರಾವರಿ ಯೋಜನೆಯ ಬಗ್ಗೆ ಸ್ಥಳ ಮಾಪನ ಕಾರ್ಯ ನಡೆದಿದೆಯೇ ?

ಆ) ಹಾಗಿದ್ದಲ್ಲಿ ಇದರ ಅಂದಾಜು ವೆಚ್ಚ ಎಷ್ಟು

ಇ) ಎಷ್ಟು ಎಕರೆ ನೀರಾವರಿ ಆಗಂತ್ತದೆ.

ಈ) ಅಂದಾಜು ತಯಾರಾಗದಿದ್ದಲ್ಲಿ, ಅಂದಾಜನ್ನು ಯಾವಾಗ ತಯಾರಿಸಲಾಗುವುದಂ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಅಡವಿ ಹನುಮಪ್ಪ ಮತ್ತು ಹೆಸರೂರು ಸಂಯುಕ್ತ ಏತ ನೀರಾವರಿ ಯೋಜನೆಗೆ ಸ್ಥಳ ಮಾಪನ ಕಾರ್ಯ ನಡೆಯುತ್ತಿದೆ.

ಆ) ಸ್ಥಳ ಮಾಪನ ಕಾರ್ಯ ಮತ್ತು ಅಂದಾಜು ತಯಾರಿಕೆಯಲ್ಲಿದ್ದು ಸುಮಾರು ಆರು ತಿಂಗಳಲ್ಲಿ ಸ್ಥಳ ಮಾಪನ ಕಾರ್ಯ ಮುಗಿಯುವ ನಿರೀಕ್ಷೆಯಿದೆ, ನಂತರ ಅಂದಾಜು ವೆಚ್ಚ ತಿಳಿಯುವುದು

ಇ) ಸುಮಾರು ೪೦೦೦ ಎಕರೆಗಳು

ಈ) ಸುಮಾರು ಆರು ತಿಂಗಳಲ್ಲಿ

ಶ್ರೀ ಕೆ. ಎಚ್, ಕುರಡಗಿ.—ಅಡವಿಹನುಮಪ್ಪನ ಜೊತೆಗೆ ರಾಟಿ ಎಂಬುವರ ಹೆಸರು ಬಂದಿಲ್ಲ.

ಶ್ರೀ ಆರ್.ಎನ್. ಲಕ್ಷ್ಮೀಪತಿ.—ಪ್ರಶ್ನೆ ಏನಿತ್ತು ಅದರ ಬಗ್ಗೆ ಉತ್ತರ ಕೊಟ್ಟಿದ್ದೇನೆ.

ಶ್ರೀ ಕೆ.ಎಚ್. ಕಾರಡಗಿ. ಏತ ನೀರಾವರಿ ಯೋಜನೆಗೆ ಸ್ಥಳ ಮಾಪನ ಕಾರ್ಯ ಮುಗಿಯಲು ಆರು ತಿಂಗಳು ಆಗುತ್ತದೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇಷ್ಟು ತಡವಾಗಲು ಕಾರಣವೇನು ?

ಶ್ರೀ ಆರ್.ಎನ್. ಲಕ್ಷ್ಮೀಪತಿ.—ತನಿಖೆ ನಡೆಯುತ್ತಿದೆ, ಸರ್ವೆ ಕೆಲಸ ಮುಗಿದ ಮೇಲೆ ಎಷ್ಟು ಎಕರೆ ಭೂಮಿ ಸಿಗುತ್ತದೆ ಎನ್ನುವುದು ನಿಖರವಾಗಿ ತಿಳಿದಮೇಲೆ ಆಲೋಚನೆ ಮಾಡುತ್ತೇನೆ. ಈಗ ಸರ್ವೆ ಕೆಲಸ ಅಲ್ಲಿ ನಡೆಯುತ್ತಿದೆ.

ಪುತ್ತೂರು ನಗರದಲ್ಲಿ ಅಡ್ಡ ರಸ್ತೆಯ ನಿರ್ಮಾಣ

೪೪೪ (೩೫) ಶ್ರೀ ಕೆ. ರಾಮಭಟ್ (ಪುತ್ತೂರು).—ಲೋಕೋಪಯೋಗಿ ಹಾಗೂ ನಿರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಪುತ್ತೂರು ನಗರಕ್ಕೆ ಒಂದು ಅಡ್ಡ ರಸ್ತೆಯ ಅವಶ್ಯಕತೆಯಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಸದರಿ ಅಡ್ಡ ರಸ್ತೆಗೆ ತಗಲಬಹುದಾದ ಒಟ್ಟು ವೆಚ್ಚವೆಷ್ಟು ? (ಭೂ ಸ್ವಾಧೀನ ಮತ್ತು ರಸ್ತೆ ರಚನೆಗೆ ತಗಲುವ ವೆಚ್ಚವನ್ನು ಬೇರೆ ಬೇರೆ ನಮೂದಿಸಬೇಕು);

ಇ) ೧೯೬೬-೬೪ನೇ ವರ್ಷದಲ್ಲಿ ಈ ಅಡ್ಡ ರಸ್ತೆಯ ಕಾಮಗಾರಿಯನ್ನು ಪ್ರಾರಂಭಿಸಲಾಗುವುದೇ ಇಲ್ಲವಾದಲ್ಲಿ ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಉಪಮಾರ್ಗದ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಒಟ್ಟು ಅಂದಾಜು ವೆಚ್ಚ ೫೦-೦೦ ಲಕ್ಷ ರೂ. ಗಳು

ಭೂ ಸ್ವಾಧೀನ ವೆಚ್ಚ	.....	೨೧-೦೦ ಲಕ್ಷ ರೂ.ಗಳು.
ರಸ್ತೆ ನಿರ್ಮಾಣ ವೆಚ್ಚ	.....	೨೯-೦೦ ಲಕ್ಷ ರೂ. ಗಳು.

ಇ) ಈ ಕೆಲಸವನ್ನು ಹಣದ ಅಭ್ಯತೆಯನ್ನು ಗಮನಿಸಿ ಆದ್ಯತೆಯ ಪ್ರಕಾರ ತೆಗೆದುಕೊಳ್ಳಲಾಗುವುದು

ಶ್ರೀ ಕೆ. ರಾಮಭಟ್.—೨ ವರ್ಷಗಳಿಂದ ಬಜೆಟ್‌ನಲ್ಲಿ ೫೦ ಸಾವಿರ ರೂಪಾಯಿ ಎಂದು ಇಟ್ಟಿದ್ದೀರಿ. ಆ ಹಣವನ್ನು ಏತಕ್ಕೆ ಇಟ್ಟಿದ್ದಿರೊ ಗೊತ್ತಿಲ್ಲ. ಪುತ್ತೂರುನಗರದ ಅಡ್ಡರಸ್ತೆಯನ್ನು ಯಾವಾಗ ಶುರುಮಾಡುತ್ತೀರಿ ಎಂಬುದೆನ್ನು ನಿಖರವಾಗಿ ಹೇಳುತ್ತೀರಾ ?

ಶ್ರೀ ಎಚ್.ಡಿ ದೇವೇಗೌಡ —ಈ ಕೆಲಸ ತೆಗೆದುಕೊಳ್ಳಬೇಕಾದರೆ ಕೆಲವು ತೊಂದರೆಗಳಿವೆ. ಸುಮಾರು ೧೭ ಎಕರೆಗೆ ಮೇಲ್ಪಟ್ಟು ವೆಟ್‌ಲ್ಯಾಂಡ್ ಅಕ್ವೈರ್ ಮಾಡಬೇಕಾಗುತ್ತದೆ. ಅದೇ ರೀತಿ ೧೧-೦೩ ಎಕರೆ ಡ್ರೈಲ್ಯಾಂಡ್ ಅಕ್ವೈರ್ ಮಾಡಬೇಕಾಗುತ್ತದೆ, ಜೊತೆಗೆ ೩.೧೬ ಎಕರೆ ಗಾರ್ಡನ್ ಲ್ಯಾಂಡ್ ಅಕ್ವೈರ್ ಮಾಡಬೇಕಾಗುತ್ತದೆ. ಭೂಸ್ವಾಧೀನ ಮಾಡಿಕೊಳ್ಳಲಿಕ್ಕೆ ೨೧ ಲಕ್ಷ ರೂಪಾಯಿ ಪರಿಹಾರ ಹಣ ಕೊಡಬೇಕಾಗುತ್ತದೆ. ಪುತ್ತೂರು ನಗರ ಪ್ರಮುಖವಾದ ನಗರವೆಂಬುದು ಗೊತ್ತು. ಸುಮಾರು ೫ ಸಾವಿರ ವಾಹನಗಳು ಪ್ರತಿದಿನ ಓಡಾಡುತ್ತವೆ. ಸುಮಾರು ೪ ಕಿಲೋಮಿಟರ್ ಬೈಪಾಸ್ ರಸ್ತೆ ಮಾಡಬೇಕಾಗುತ್ತದೆ. ಈಗಿರತಕ್ಕ ತೊಂದರೆಯನ್ನು ಶೀಘ್ರ ನಿವಾರಣೆ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಈ ಕೆಲಸಕ್ಕಾಗಿ ಬಜೆಟ್‌ನಲ್ಲಿ ೫೦ ಸಾವಿರ ಇಟ್ಟಿದ್ದೇವೆ. ಕೆಲವು ಫಾರ್ಮಾಲಿಟೀಸ್ ಅಬ್ಸರ್ವ್ ಮಾಡಬೇಕಾಗುತ್ತದೆ. ಭೂಸ್ವಾಧೀನ ಕೆಲಸ ಮುಗಿದ ಮೇಲೆ ಕೆಲಸ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ರಾಂಪಭಟ್.—ತಮ್ಮ ಲೋಕೋಪಯೋಗಿ ಇಲಾಖೆಯ ನಿಯಮದ ಪ್ರಕಾರ, ಟೋಟಲ್ ಕಾಸ್ಟ್‌ನ ಒನ್‌ಥರ್ಡ್ ಹಣ ಇಡಬೇಕೆಂದು ನಿಯಮವಿದೆ. ಆ ಪ್ರಕಾರ ಭೂಸ್ವಾಧೀನಕ್ಕೆ ತಗಲುವ